ಮುಕುಂದ ಹೆರಕಲ್ಲ, ಕಲಬುರ್ಗಿ
*ದೇಶಾಭಿಮಾನ ಹೇಗಿರಬೇಕು?*



ವಯಸ್ಸಿನಲ್ಲಿ ತಾನು, ನಂತರದಲ್ಲಿ ಮಕ್ಕಳನ್ನು ಸೇನೆಗೆ ಕಳಿಸುವಂತಿರಬೇಕು.

ಶಿವಸ್ವಾಮಿ ನೇನೇಕಟ್ಟೆ, ಬೆಂಗಳೂರು
*ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು. ಒಲ್ಲದ ಹೆಂಡತಿಗೆ?*
ಆಸ್ತಿಯಲ್ಲಿ ಪಾಲು!

ರತ್ನಜ, ಮೈಸೂರು
*ಹೆಸರಿಗೂ, ಉಸಿರಿಗೂ ಏನು ಸಂಬಂಧ?*
ಕಲ್ಲಿನ ಸಂಬಂಧ; ಉಸಿರು ನಿಂತಾಗ ಕಲ್ಲಿನ ಕೆಳಗೆ; ಹೆಸರು ನಿಂತಾಗ ಕಲ್ಲಿನ ಮೇಲೆ!

ವಿದ್ಯಾ ಎನ್. ಪೈ, ಕಾಸರಕೋಡ
*ಸಂಸಾರ ಒಂದು ಮಹಾ ಸಾಗರದಂತೆ. ಏಕೆ?*
ದಿನವೂ ಒಂದಲ್ಲ ಒಂದು ಅಲೆ ಅಪ್ಪಳಿಸುವುದರಿಂದ.

ವಿ. ಹೇಮಂತಕುಮಾರ್, ಬೆಂಗಳೂರು
*ಜುಳುಜುಳನೆ ಹರಿಯುವ ನೀರಿನದು ಯಾವ ಭಾಷೆ?*




ಜೀವ ಭಾಷೆ.

ಟಿ.ಎಂ. ಮಾನಪ್ಪ, ಶಿವಮೊಗ್ಗ
*ಎರಡು ತುಟಿಗಳು ಸೇರಿದರೆ ಮೌನ. ಎರಡು ಜಡೆಗಳು ಸೇರಿದರೆ?*
ತಲೆಯಲ್ಲಿರುವಾಗಲೇ ಸೇರಿದ್ದರೆ ಪರಸ್ಪರರ ಪತಿಯರಿಗೆ ಚೌರ; ಕತ್ತರಿಸಿದನಂತರ ಸೇರಿದರೆ ಚೌರಿ.

ಎಂ.ಎ. ಕುಮಾರ್, ಬೆಂಗಳೂರು
*ಗೃಹಸ್ಥನ ಪತ್ನಿ ಒಂದು ವಾರ ಊರಿಗೆ ಹೋದ ಸಮಯದಲ್ಲಿ ಅವನ ಸ್ಥಿತಿ ಹೇಗಿರುತ್ತದೆ?*
ಪೂರಿಯಂತೆ. ಮೊದಲ ದಿನ ಖುಷಿಯಿಂದ ಉಬ್ಬುವುದು; ನಂತರ ಸಂಪೂರ್ಣ ನಿಸ್ತೇಜ.

ಕೆ.ಎಂ. ವಿಭೂತಿ, ಹರಿಹರ
*ಸೌಂದರ್ಯಕ್ಕೂ ಜಿಎಸ್‌ಟಿ ಲಾಗೂ ಆದರೆ ವಿಶ್ವಸುಂದರಿಯರ ಗತಿ?*
ನೋ ಪ್ರಾಬ್ಲಮ್. ಪ್ರತಿ ವಿಶ್ವಸುಂದರಿಯ ಹಿಂದೆ ಸಾವಿರಾರು ಬೋಳಿಸಿಕೊಳ್ಳಲು ಸಿದ್ಧವಾದ ತಲೆಗಳಿರುತ್ತವೆ!

ಹೆಚ್.ಎಂ. ಅನಂತಪದ್ಮನಾಭ, ಮೈಸೂರು
*ಕ್ರಿಕೆಟ್‌ನಲ್ಲಿ ಮೂರನೆಯ ಅಂಪೈರ್ ಇರುವಂತೆ ಜೀವನದಲ್ಲೂ ಇರುತ್ತಿದ್ದರೆ.....?*
ಈಗಲೇ ಇದ್ದಾರಲ್ಲ..... ನಮ್ಮೆಲ್ಲ ಆಟಗಳನ್ನು ಸೂಕ್ಷ್ಮವಾಗಿ ನೋಡಿ ನಿರ್ಧರಿಸುವ ಅಕ್ಕಪಕ್ಕದವರು ಥರ್ಡ್ ಅಂಪೈರ್‌ಗಳೇ.

ಅಮರಯ್ಯಾ ಪತ್ರಿಮಠ, ಸುರಪೂರ
*ರಾವಣನ ಹತ್ತು ತಲೆಗಳಲ್ಲಿ ಒಂದು ತಲೆಗೂ ಧರ್ಮದ ಹಾದಿ ಹೊಳೆಯಲಿಲ್ಲವೆ?*
ಊಹೂಂ. ಅಧರ್ಮ ರ‍್ಯಾನ್‌ಸಮ್ ವೈರಸ್‌ನಂತೆ. ಒಮ್ಮೆ ಒಳನುಗ್ಗಿದರೆ ಇಡೀ ಸಿಸ್ಟಮ್ಮೇ ಢಮಾರ್.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
*ಪ್ರಾಣಿಗಳಿಗೂ ವಾಹನಗಳ ಸಿಗ್ನಲ್ ತಿಳಿದರೆ ಹೇಗಿರುತ್ತೆ ಸಾರ್?*
ತಿಳಿಯಲ್ಲ ಎನ್ನುವಿರೆ? ಮೊನ್ನೆ ಒಬ್ಬ ‘ಏ ಕತ್ತೆ! ನೋಡ್ಕೊಂಡ್ಹೋಗೋ’ ಎಂದಾಗ ಇದು ‘ನೋಡ್ಕೊಂಡೇ ಹೋಗ್ತಿರೋದು’ ಎಂದಿತಲ್ಲಾ...!

ಬಿ. ಚಂದ್ರೇಗೌಡ, ಬೆಂಗಳೂರು
*ಲಂಚ : ಇದು ಕರ್ಮಪದವೋ, ಕ್ರಿಯಾಪದವೋ?*
ಕೊಡುವವನಿಗೆ ಕರ್ಮ ಪದ; ಪಡೆಯುವವನಿಗೆ ವಿಕ್ರಿಯಾ–ಪದ.

ಶೀಲಾ ಸತ್ಯೇಂದ್ರಸ್ವಾಮಿ, ಹರವೆ
*ಈ ಅಂಕಣ ನಿಮ್ಮದೇ ಅಧ್ಯಕ್ಷತೆಯ ಅನುಭವ ಮಂಟಪ. ನಿಮ್ಮ ಈ ಅಧಿಕಾರಕ್ಕೆ ಕುತ್ತು ಬಂದರೆ?*
ಬಸವಣ್ಣನ ನಂತರವೂ ತತ್ವ ಉಳಿಯಿತಲ್ಲವೆ; ನನ್ನ ನಂತರವೂ ಹಾಸ್ಯ ಉಳಿದು ಅಂಕಣ ವೃದ್ಧಿಸುವುದು ನಿಶ್ಚಿತ.

## ಬಹುಮಾನಿತ ಪ್ರಶ್ನೆ

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
*ಆಷಾಢಮಾಸದಲ್ಲಿ ಮಗಳ ಬದಲು ಅಳಿಯ ಮಾವನ ಮನೆಗೆ ಬಂದರೆ?*
ವ್ಯತ್ಯಾಸವೇನಿಲ್ಲ. ತೊಟ್ಟಿಗೆ ಪಟಾಕಿ ಬಿದ್ದರೂ, ಪಟಾಕಿಗೇ ನೀರು ಬಿದ್ದರೂ ದೀಪಾವಳಿ ಹಾಳೇ.....

ರವಿ ಎಂ. ಪೈ, ಹೊನ್ನಾವರ
*ಮಹಿಳೆಯರಿಗೆ ಮೌನವೇ ಆಭರಣ. ಏಕೆ?*
ಮಾತನಾಡಿದ ಸಮಯಕ್ಕಿಂತ ಮೌನಕ್ಕೆ ಶರಣಾದಾಗಲೇ ಹೆಚ್ಚು ಆಭರಣ ದೊರಕುವುದರಿಂದ!

ಜೆ.ಎ. ನಾರಾಯಣಮೂರ್ತಿ, ಮೈಸೂರು
*ಏಕಾದಶಿ ಮರಣ, ದ್ವಾದಶಿ ದಹನ ತುಂಬಾ ಪ್ರಶಸ್ತ ಅಂತಾರಲ್ಲ, ಮರಣ ಎಂದು ಬರುವುದೆಂದು ಯಾರಿಗೆ ಗೊತ್ತು?*
ಅದೇನೂ ಕಷ್ಟವಲ್ಲ; ಜೀವ ಎಂದೇ ಹೋಗಿರಲಿ, ಏಕಾದಶಿಯಂದು ವೆಂಟಿಲೇಟರ್ ತೆಗೆಯಲು ಹೇಳಿದರಾಯ್ತು.

ಜಿ.ಆರ್. ಆದಿನಾರಾಯಣಮುನಿ, ಬೆಂಗಳೂರು
*ಜೀವನದಲ್ಲಿ ಕಾಮ ಎನ್ನುವುದೇ ಇಲ್ಲದಿದ್ದರೆ ಏನಾಗುತ್ತಿತ್ತು?*



ಪ್ರಪಂಚ ಎಂದೋ ಫುಲ್‌ಸ್ಟಾಪ್ ಆಗುತ್ತಿತ್ತು.

ಪಿ.ಎಸ್. ಶ್ರೀವತ್ಸ, ಬೆಂಗಳೂರು
*ಆರೋಗ್ಯ, ಆಯುಷ್ಯ, ಐಶ್ವರ್ಯ ಮೂರನ್ನೂ ಆ ಭಗವಂತ ಎಲ್ಲರಿಗೂ ದಯಪಾಲಿಸಿದ್ದಿದ್ದರೆ?*
ಬೀಸುವ ಕಲ್ಲು, ರುಬ್ಬುಗುಂಡುಗಳಂತೆಯೇ ಭಗವಂತನೂ ಮೂಲೆಗುಂಪಾಗುತ್ತಿದ್ದ.

ಸುಂದರ್, ಬೆಂಗಳೂರು
*ಸರ್ಕಾರಿ ಶಾಲೆಗಳಿಗೆ ಸೂರಿನ ಭಾಗ್ಯ, ಉಪಾಧ್ಯಾಯರ ಭಾಗ್ಯ, ಪಾಠದ ಭಾಗ್ಯ ಯಾವಾಗ ಬರಬಹುದು?*
ಆಡಳಿತ ನಡೆಸುವವರಿಗೆ ವಿವೇಕದ ಭಾಗ್ಯ ದೊರಕಿದಂದು.

■ ರಾಮ್